

# ಮುದನೀಡುವ ಮುಂಬೈ ಮಲ್ಲಿಗೆ

ಚಿತ್ರ – ಬರಹ:
**ದೇವಿದಾಸ ಸುವರ್ಣ, ಅಂಕೋಲಾ**

ಡಿಸೆಂಬರ್‌ನಿಂದ ಪ್ರಾರಂಭವಾಗಿ ಮಳೆಗಾಲ ಸಮೀಪಿಸುವವರೆಗೆ ಈ ಹೂವು ಅರಳುತ್ತ ಆಗಾಗ ಸುವಾಸನೆಯನ್ನು ಹರಡುತ್ತ ಮನಸನ್ನು ಉಲ್ಲಸಿತಗೊಳಿಸುತ್ತ ಇರುತ್ತದೆ. ದ್ರಾಕ್ಷಿಯಂತೆ ಗೊಂಚಲು ಗೊಂಚಲಾಗಿ ಅರಳಿ ಮನೆಯ ಸೌಂದರ್ಯವನ್ನು ವೃದ್ಧಿಸುತ್ತದೆ. ಆಂಗ್ಲ ಭಾಷೆಯಲ್ಲಿ 'ಕೊಂಬ್ರೆಟಮ್ ಇಂಡಿಕಮ್' ಅಥವಾ ರಂಗೂನ್ ಕ್ರೀಪರ್ ಎಂಬ ಹೆಸರಿನಿಂದ ಕರೆಯಲ್ಪಡುವ ಈ ಹೂವಿಗೆ, ಕರಾವಳಿಯ ಆಡು ಭಾಷೆಯಲ್ಲಿ 'ಮುಂಬೈ ಮಲ್ಲಿಗೆ' ಎಂದು ಕರೆಯುತ್ತಾರೆ.

ಇದು ಮರವಾಗಿ ಬೆಳೆಯದೇ ಬಳ್ಳಿಯಂತೆ ಹಬ್ಬುತ್ತದೆ. ಸ್ವತಂತ್ರವಾಗಿ ಬೆಳೆಯಲಾರದು. ಬಳ್ಳಿ ಹಬ್ಬಲು ಬೇಲಿಯಾಗಲೀ ಅಥವಾ ಯಾವುದಾದರೂ ಮರದ ಆಶ್ರಯ ಬೇಕು.

ಇದಕ್ಕೆ ನೀರುಣಿಸಿ ಬೆಳೆಸುವ ಅವಶ್ಯಕತೆ ಇಲ್ಲ. ಡಿಸೆಂಬರ್ ತಿಂಗಳಿಂದ ಚಿಗುರುತ್ತ, ಬಳ್ಳಿಯಾಗಿ ಹಬ್ಬುತ್ತ ಹೂ ಬಿಡಲು ಆರಂಭಿಸುತ್ತದೆ. ಅರಳಿದ ಹೂವು ಮೂರರಿಂದ ನಾಲ್ಕು ದಿನಗಳವರೆಗೆ ಇದ್ದು ಆನಂತರ ಉದುರಿ ಹೋಗುತ್ತವೆ.

ಯಾವುದೇ ಹೂವಿನ ಮಾಲೆ ಕಟ್ಟಬೇಕಿದ್ದರೆ ಬಳ್ಳಿ ಅಥವಾ ನಾರಿನ ಅವಶ್ಯಕತೆ ಇರುತ್ತದೆ. ಆದರೆ ಈ ಹೂವಿನ ವಿಶೇಷತೆಯೆಂದರೆ ಈ ಹೂವಿನ ತೊಟ್ಟು 5 ರಿಂದ 6 ಸೆಂಟಿ ಮೀಟರ್‌ನಷ್ಟು ಉದ್ದವಿರುವುದರಿಂದ ಅದನ್ನೇ ಮಹಿಳೆಯರು ಜಡೆ ಹೆಣೆದಂತೆ ಹೆಣೆದು ಬಳ್ಳಿಯ ಸಹಾಯವಿಲ್ಲದೆ ಮಾಲೆ ಮಾಡುತ್ತಾರೆ.

